ದಿನಾಂಕಃ25.01.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ**

ದಿ.24.11.2023 ರಂದು ನಾನು ನ್ಯಾಯಾಲಯದ ಮುಂದೆ ಏನು ಹೇಳಿದ್ದೇನೆ ಎಂದು ನನಗೆ ಗೊತ್ತಿದೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು 2013 ನೇ ಇಸವಿಯಲ್ಲಿ ಹಾರ್ಮಕ್ಕಿ ಎಸ್ಟೇಟ್ ನಲ್ಲಿ ಕೆಲಸ ಮಾಡಲು ರೂ.4 ಲಕ್ಷ ಮುಂಗಡ ಹಣ ಪಡೆದು ಅದರ ಭದ್ರತೆಗಾಗಿ ಸಹಿ ಮಾಡಿದ ಖಾಲಿ ಚೆಕ್ ನ್ನು ಪಿರ್ಯಾದುದಾರರಿಗೆ ಕೊಟ್ಟಿದ್ದೆ ಎಂದು ಹೇಳಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ ಯಾವುದೇ ಚೆಕ್ ಕೊಟ್ಟಿಲ್ಲ ಎಂದರೆ ಸರಿ. ನಾನು ಹೇಳಿರುವಂತೆ ಯಾವುದೇ ಕೂಲಿ ಕಾರ್ಮಿಕರನ್ನು ಪಿರ್ಯಾದಿಯ ಬಳಿ ಕೆಲಸ ಮಾಡಿಲು ಬಿಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪಿರ್ಯಾದಿಯಿಂದ ಯಾವುದೇ ಮುಂಗಡ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ನಾನು ಹೇಳಿರುವಂತೆ ನವೆಂಬರ್ 2013 ರಿಂದ ಮಾರ್ಚ್ 2014 ರವರೆಗೆ ಪಿರ್ಯಾದಿಯ ಎಸ್ಟೇಟ್ ನಲ್ಲಿ ರೂ.8,85,000/- ಗಳ ಒಟ್ಟು ಕೂಲಿಗೆ ಕೆಲಸ ಮಾಡಿರುತ್ತೇವೆ ಎಂದು ಹೇಳಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಿನದ ಕೂಲಿ ರೂ.350/- ಕ್ಕೆ ಮಾತುಕತೆಯಾಗಿತ್ತು ಎಂದು ಹೇಳಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. 2013 ನೇ ಸಾಲಿನಲ್ಲಿ ಕೂಲಿ ಕೆಲಸದವರಿಗೆ ರೂ.150/- ರಿಂದ ರೂ.160/- ದಿನಗೂಲಿ ಇತ್ತು ಎಂದರೆ ಸರಿಯಲ್ಲ. ಅಡ್ವಾನ್ಸ್ ಪಡೆದುಕೊಂಡು ಕೂಲಿ ಕೆಲಸಕ್ಕೆ ಹೋಗುವವರಿಗೆ ದಿನಕ್ಕೆ ರೂ.330/- ರಂತೆ ಸಂಬಳ ಕೊಡಲಾಗುತ್ತದೆ ಎಂದರೆ ಸಾಕ್ಷಿಯು ಕಮೀಷನ್ ಸೇರಿ ರೂ.330/- ಎಂದು ನುಡಿಯುತ್ತಾರೆ. ಈಗಲೂ ಸಹಾ ಅಡ್ವಾನ್ಸ್ ಪಡೆದುಕೊಂಡು ಕೂಲಿ ಕೆಲಸ ಮಾಡುವವರಿಗೆ ದಿನಕ್ಕೆ ರೂ.330/- ಸಂಬಳ ಇದೆ ಎಂದರೆ ಸರಿ.

2013 ರಲ್ಲಿ ಪ್ರಧಾನಮಂತ್ರಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ದಿನಗೂಲಿ ಕೆಲಸದವರಿಗೆ ದಿನಕ್ಕೆ ರೂ.160/- ದಿನಗೂಲಿ ಇತ್ತು ಎಂದರೆ ಸರಿಯಲ್ಲ. ಅಡ್ವಾನ್ಸ್ ಪಡೆದುಕೊಂಡು ಕೂಲಿ ಕೆಲಸ ಮಾಡುವವರಿಗೆ ಕಡಿಮೆ ಸಂಬಳ ಕೊಡಲಾಗುತ್ತದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಇರುವ ನಿಪಿ-1(ಎ) ಸಹಿ ನನ್ನದೆ. ನಾನು 2002-03 ನೇ ಇಸವಿಯಿಂದಲೂ ಸಹಾ ಎಸ್ಟೇಟ್ ನ ಕೆಲಸಕ್ಕೆ ಕೂಲಿ ಕಾರ್ಮಿಕರನ್ನು ಬಿಡುವ ಕೆಲಸ ಮಾಡುತ್ತಿದ್ದೇನೆ. ಖಾಲಿ ಚೆಕ್ ಗೆ ಸಹಿ ಮಾಡಿ ಕೊಟ್ಟರೆ ಅದು ದುರುಪಯೋಗವಾಗುತ್ತದೆ ಎಂಬ ವಿಚಾರ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನ

ಮುಖ್ಯ ವಿಚಾರಣೆ ದಾಖಲು ಮಾಡಿಕೊಂಡ ನಂತರವೂ ಸಹಾ ಪಿರ್ಯಾದುದಾರರಿಗೆ ಹಣ ಕೊಡಲು ನಾನು ಬಾಧ್ಯಸ್ತ ಎಂದು ಪಿಡಬ್ಲ್ಯೂ.2 ರವರಿಗೆ ದೂರವಾಣಿ ಮೂಲಕ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರ ಪರಿಚಯ ತಮಗಿಲ್ಲ ಎಂದು ನುಡಿಯುತ್ತಾರೆ.

ಕೂಲಿ ಕೆಲಸದವರಿಗೆ ವಾರದ ಕೊನೆಯಲ್ಲಿ ಸಂಬಳ ಕೊಡುತ್ತಾರೆ ಎಂದರೆ ಸರಿಯಲ್ಲ. ಅಡ್ವಾನ್ಸ್ ಪಡೆದುಕೊಂಡು ಕೂಲಿ ಕೆಲಸ ಮಾಡುವವರಿಗೆ ವಾರದ ಕೊನೆಯ ಸಂಬಳದಲ್ಲಿ ಸ್ವಲ್ಪ ಹಣ ಕಡಿತಗೊಳಿಸಲಾಗುತ್ತದೆ ಎಂದರೆ ಸರಿಯಲ್ಲ. ಹಬ್ಬದ ಸಂದರ್ಭಗಳಲ್ಲಿ ಹಾಗೂ ಆರೋಗ್ಯ ಸರಿಯಿಲ್ಲದ ಸಮಯದಲ್ಲಿ ಸಂಬಳದಲ್ಲಿ ಕಡಿತಗೊಳಿಸಲಾಗುವುದಿಲ್ಲ ಎಂದರೆ ಸರಿಯಲ್ಲ. ಅಂತಹ ಸಂದರ್ಭಗಳಲ್ಲಿ ಹಣ ಕಡಿತಗೊಳಿಸಿದರೆ ಕೆಲಸಕ್ಕೆ ಬರುವುದಿಲ್ಲ ಎಂದು ಕೂಲಿ ಕೆಲಸದವರು ಮಾಲೀಕರಿಗೆ ಹೆದರಿಸುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಕೆಲಸಗಾರರಿಗೆ ಕೊಟ್ಟ ಹಣ ಒಟ್ಟು ಕೂಲಿ ಲೆಕ್ಕ ಮಾಡುವಾಗ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದರೆ ಸರಿಯಲ್ಲ.

2014 ನೇ ಇಸವಿಯಲ್ಲಿ ಪಿರ್ಯಾದುದಾರರ ತೋಟಕ್ಕೆ 30 ಜನ ಕೂಲಿ ಕಾರ್ಮಿಕರನ್ನು ಕಳುಹಿಸುತ್ತೇನೆ ಎಂದು ಹೇಳಿ ಅವರಿಂದ ರೂ.4 ಲಕ್ಷ ಮುಂಗಡ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆದರೆ ನಾನು ಕೇವಲ 5 ಜನರನ್ನು ಮಾತ್ರ ಕೆಲಸಕ್ಕೆ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕಳುಹಿಸಿದ್ದ ಕೂಲಿ ಕೆಲಸದವರು ತಮಗೆ ಬರಬೇಕಾದ ಸಂಬಳವನ್ನು ಪಿರ್ಯಾದುದಾರರಿಂದ ಸಂಪೂರ್ಣವಾಗಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. 2015 ನೇ ಇಸವಿಯಲ್ಲಿ ಪಿರ್ಯಾದುದಾರರು ಲೆಕ್ಕಚಾರ ಮಾಡಿ ನಾನು ಅವರಿಗೆ ರೂ.3,75,000/- ಹಣ ನೀಡಲು ಬಾಕಿ ಇರುತ್ತದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ ಪಡೆದುಕೊಂಡ ಮುಂಗಡ ಹಣವನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಫೆಬ್ರವರಿ 2015 ನೇ ಇಸವಿಯಲ್ಲಿ ಪಿರ್ಯಾದುದಾರರು ಕೂಲಿ ಲೆಕ್ಕಾಚಾರ ಮಾಡಿದ ಸಮಯದಲ್ಲಿ ಬಾಕಿ ಹಣವನ್ನು ಮರುಪಾವತಿಸಲು ನಾನು ಪಿರ್ಯಾದುದಾರರಿಗೆ ದಿ.15.03.2015 ಎಂದು ನಮೂದಿಸಿ ನಿಪಿ-1 ರ ಚೆಕ್ ನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಪಿರ್ಯಾದುದಾರರು ದಿ.06.04.2015 ರಂದು ವಕೀಲರ ಮೂಲಕ ನನಗೆ ಕಳುಹಿಸಿದ ನೋಟೀಸಿನ ಬಗ್ಗೆ ನನಗೆ ತಿಳಿದಿದ್ದರೂ ಸಹಾ ಅದರ ಜಾರಿಯನ್ನು ಉದ್ದೇಶಪೂರ್ವಕವಾಗಿ ತಪ್ಪಿಸುತ್ತಿದ್ದೆ ಎಂದರೆ ಸರಿಯಲ್ಲ. ಮಾರ್ಚ್ 2014 ನೇ ಇಸವಿಯಲ್ಲಿ ಲೆಕ್ಕಾಚಾರ ಮಾಡಿದ ನಂತರ ಪಿರ್ಯಾದುದಾರರು ಪೂರ್ಣವಾಗಿ ಕೂಲಿ ಹಣ ಕೊಡದಿದ್ದ ವಿಚಾರವಾಗಿ ನಾನು ಪಿರ್ಯಾದುದಾರರ

ವಿರುದ್ದ ಪೋಲಿಸರಿಗೆ ದೂರು ನೀಡಿಲ್ಲ. ನಾನು ವಕೀಲರ ಮೂಲಕ ಪಿರ್ಯಾದುದಾರರಿಗೆ ನೋಟೀಸು ಕೊಡಿಸಿಲ್ಲ ಆದರೆ ಪೋಲಿಸರ ಮೂಲಕ ಕೊಡಿಸಿದ್ದೇನೆ. ಆ ರೀತಿ ಪೋಲಿಸರ ಮೂಲಕ ನೋಟೀಸು ಕೊಡಿಸಿರುವ ವಿಚಾರ ಸುಳ್ಳು, ಒಂದುವೇಳೆ ಆ ರೀತಿ ನೋಟೀಸು ಕೊಡಿಸಿದ್ದರೆ ಅಂತಹ ದಾಖಲೆಯನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಚೆಕ್ ನ್ನು ನಗಧೀಕರಣ ಮಾಡಬೇಡಿ ಎಂದು ಬ್ಯಾಂಕಿನವರಿಗೆ ಯಾವುದೇ ಪತ್ರ ಹಾಗೂ ಮಾಹಿತಿ ನೀಡಿಲ್ಲ. ಪಿರ್ಯಾದುದಾರರು ಮರಣಹೊಂದಿರುವ ಕಾರಣ ಅವರ ವಾರಸುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರತಿಪಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿರುವಂತೆ 20 ಜನ ಹೆಂಗಸರು, 22 ಜನ ಗಂಡಸರು ಹಾಗೂ 6 ಜನ ಮಕ್ಕಳನ್ನು ಕೂಲಿ ಕೆಲಸಕ್ಕೆ ಕಳುಹಿಸಿದ್ದೇನೆ ಎಂದು ಹೇಳಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. 18 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ಕಳುಹಿಸಬಾರದು ಎಂದು ತಿಳಿದಿದ್ದರೂ ಸಹಾ ಅವರನ್ನು ಕೆಲಸಕ್ಕೆ ಕಳುಹಿಸಿರುವುದಾಗಿ ಸುಳ್ಳು ಪ್ರತಿಪಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ. 18 ವರ್ಷದ ಒಳಗಿನ ವಯಸ್ಸು ಉಳ್ಳವರಿಗೆ ಮಕ್ಕಳು ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.